ಜುಡಿಷಿಯಲ್ ಇಲಾಖೆ.

ಇನ್ಸ್ಟಿಹಾರ್ನಾಮೆ.

ತಾರೀಖು 27ನೇ ಆಗಸ್ಟ್ 1884.

ಇದರಲ್ಲೀ ಕಂಡವರು, 1879ನೇ ಇಸವಿ ಫಿಬ್ರವರೀ 18ನೇ ಮರ್ಕ್ಯುಮಿನ ರೂಲ್ಸ್ ಅನುಸರಿಸಿ, ಮೈಸೂರು ಚೀಫ್ ಕೋರ್ಟಿನಲ್ಲಿ ಅಡ್ವೋಕೇಟ್‌ಗಳಾಗಿ ದಾಖಲ್ಮಾಡಲ್ಪಟ್ಟಿರುತ್ತಾರೆ:—

ಮೆ॥ ಹ್ಯಾರಿ ಜಾರ್ಜ್ ವೆಡ್ಡರ್‌ಬರ್ನ್	ಬ್ಯಾರಿಸ್ಟರ್–ಅಟ್–ಲಾ.
ಮೆ॥ ಅರಡೆಲಿ ನಾರ್ಟನ್	ಬ್ಯಾರಿಸ್ಟರ್–ಅಟ್–ಲಾ.
ಮೆ॥ ಫ್ರೆಡ್ರಿಕ್ ರಾಲಾಂಡ್ಸನ್	ಅಟ್ಟರ್ನಿ–ಅಟ್–ಲಾ.
ಮೆ॥ ಯಂ. ಓ. ಪಾರ್ಥಸಾರಥಯ್ಯಂಗಾರ್, ಯಂ. ಎ., ಯಂ. ಎಲ್.	

ಎಸ್. ಹೇಮಾಜೀರಾವ್,
ರಿಜಿಸ್ಟ್ರಾರ್.

ಫಿನಾನ್ಷಿಯಲ್ ಇಲಾಖೆ.

1882ನೇ ಮೈಸೂರು ರೈಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡಿ ಸಲ್ಲತಕ್ಕ ಬಗ್ಗೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್ ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಕ್ಸ್‌ಚೇಂಜ್‌ಮೆಂಟ್ ಯಾನೇ ಷರಾ ಬಗ್ಗೆ ಇದರಡಿ ರುಜು ಮಾಡಿರುವರೆ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಕ್ಸ್‌ಚೇಂಜ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್ಟ್ರೋಲರ್.

ಅಂಚೇ ಇಲಾಖೆ.

ನಂ. 245—137. ತಾರೀಖು 21ನೇ ಆಗಸ್ಟ್ 1884.

ಇದರಿಂದ ಸಕಲ ಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಿಸಲ್ಪಡುವದೇನೆಂದರೆ, ಮೈಸೂರ ಮಹಾರಾಜ ರಾಜಾನಾಹೆಬ್ ಬಹದೂರವರ ದಿವಾನರವರ ಅಪ್ಪಣೆ ಅನುಸರಿಸಿ ಈ ಕೆಳಗೆ ಕಂಡ ಸ್ಥಳಗಳೊಳಗೆ ಹೊಸಬಿಳಿ ಅಂಚೇ ಆಫೀಸ್‌ಗಳು ಸ್ಥಾಪಿಸಲ್ಪಟ್ಟಿರುತವೆ:—

ತಾಲ್ಲೂಕು.	ಅಂಚೇ ಆಫೀಸ್ ಸ್ಥಾಪಿಸಲ್ಪಟ್ಟ ಸ್ಥಳಗಳ ಹೆಸರು.
ಬವರಿಂಗ್‌ಪೇಟೆ	ತೇಕಲ್
ಬೇಲೂರು	ಕಿದ್ದರಹಳ್ಳಿ
ತೀರ್ಥಹಳ್ಳಿ	ಮೇಗರವಳ್ಳಿ
ಕಡೂರು	ಎಗಟಿ
ಗೋಬಿದನೂರು	ಇಡಗೂರು

ಬಿ. ಮರಿಗಂಗಯ್ಯ,
ಅಂಚೇ ಬಕಷಿ.